# ಸಂಸಾರದಲ್ಲಿ ಭಕ್ತಿ



❁ ಕಾಮಕಾಂಚನವೇ ಸಂಸಾರ. ಇದರ ಹೆಸರೇ ಮಾಯೆ ಎನ್ನುವುದು. ಅದು ಭಗವಂತನ ದರ್ಶನ ಪಡೆಯಲು, ಆತನ ಚಿಂತನೆ ಮಾಡಲು ಬಿಟ್ಟು ಕೊಡಲೊಲ್ಲದು. ಒಂದೆರಡು ಮಕ್ಕಳಾದ ನಂತರ ಹೆಂಡತಿಯೊಡನೆ ಅಣ್ಣತಂಗಿಯರ ಹಾಗೆ ವಾಸಿಸಬೇಕು. ಮತ್ತು ಆಕೆಯೊಡನೆ ಸರ್ವದಾ ಭಗವಂತನ ವಿಷಯವನ್ನೇ ಮಾತನಾಡಬೇಕು. ಹಾಗೆ ಮಾಡುವುದಾದರೆ ಇಬ್ಬರ ಮನಸ್ಸೂ ಆತನ ಕಡೆ ಹರಿಯುತ್ತದೆ. ಹೆಂಡತಿ ಭಗವಂತನ ಸಾಕ್ಷಾತ್ಕಾರ ಪಡೆಯಲು ಸಹಾಯಕಳಾಗುತ್ತಾಳೆ. ಪಶುಭಾವ ನಾಶವಾಗದ ಹೊರತು ಭಗವಂತನ ಆನಂದದ ಸವಿಯನ್ನು ಸವಿಯಲಾಗುವುದಿಲ್ಲ. ಪಶುಭಾವ ಹೃದಯವನ್ನು ಬಿಟ್ಟು ತೊಲಗಿ ಹೋಗುವಂತೆ ಭಗವಂತನಿಗೆ ಪ್ರಾರ್ಥನೆ ಮಾಡಬೇಕು; ವ್ಯಾಕುಲಚಿತ್ತದಿಂದ ಪ್ರಾರ್ಥನೆ ಮಾಡಬೇಕು. ಆತ ಅಂತರ್ಯಾಮಿ, ನಾವು ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡಿದ್ದೇ ಆದರೆ ಆತ ಕೇಳಿಯೇ ಕೇಳುತ್ತಾನೆ.

❁ ಸಂಸಾರಿ ನಿಜವಾದ ಭಕ್ತನಾದರೆ ಆತ ಅನಾಸಕ್ತನಾಗಿ ತನ್ನ ಕೆಲಸಕಾರ್ಯಗಳನ್ನು ಮಾಡುತ್ತಾನೆ. ತನ್ನ ಕರ್ಮದ ಫಲ ಲಾಭದಾಯಕವಾಗಿದ್ದರೂ ಸರಿಯೆ, ನಷ್ಟದಾಯಕವಾಗಿದ್ದರೂ ಸರಿಯೆ, ಸುಖದಾಯಕವಾಗಿದ್ದರೂ ಸರಿಯೆ, ದುಃಖದಾಯಕವಾಗಿದ್ದರೂ ಸರಿಯೆ ಎಲ್ಲವನ್ನು ಭಗವಂತನಿಗೆ ಅರ್ಪಿಸಿಬಿಡುತ್ತಾನೆ. ಹಗಲಿರುಳು ಭಕ್ತಿಗಾಗಿ ಪ್ರಾರ್ಥನೆ ಮಾಡುತ್ತಾನೆ, ಮತ್ತೆ ಬೇರೆ ಯಾವುದಕ್ಕೂ ಪ್ರಾರ್ಥನೆ ಮಾಡುವುದಿಲ್ಲ. ಇದಕ್ಕೆ **ನಿಷ್ಕಾಮಕರ್ಮ** ಅಂತ ಹೆಸರು. ಅಂದರೆ ಅನಾಸಕ್ತಿಯಿಂದ ಕೆಲಸ ಮಾಡುವುದು. ಸಂನ್ಯಾಸಿಯೂ ಎಲ್ಲಾ ಕೆಲಸಗಳನ್ನು ನಿಷ್ಕಾಮ ಭಾವನೆಯಿಂದ ಮಾಡಬೇಕು; ಆದರೆ ಆತ ಸಂಸಾರಿಗಳ ಹಾಗೆ ಪ್ರಾಪಂಚಿಕ ಕರ್ಮಗಳನ್ನು ಮಾಡಬೇಕಾಗಿರುವುದಿಲ್ಲ.

❁ ಸಂಸಾರಿ ನಿಷ್ಕಾಮ ಭಾವನೆಯಿಂದ ಯಾರಿಗಾದರೂ ದಾನ ಮಾಡಿದರೆ ಅದು ತನ್ನ ಉಪಕಾರಕ್ಕಾಗಿಯೇ ವಿನಾ ಪರರ ಉಪಕಾರಕ್ಕಲ್ಲ. ಸರ್ವಭೂತಗಳಲ್ಲಿಯೂ ಭಗವಂತನು ಇರುವುದರಿಂದ ಆತನ ಸೇವೆ ಮಾಡಿದಂತೆಯೇ ಆಗುತ್ತದೆ. ಹರಿಯ ಸೇವೆ ಮಾಡಿದರೆ ಅದು ತನಗೇ ಉಪಕಾರ ಮಾಡಿಕೊಂಡಂತಾಗುವುದೇ ವಿನಾ ಪರರಿಗಲ್ಲ. ಸರ್ವಭೂತಗಳಲ್ಲಿಯೂ— ಬರೀ ಮನುಷ್ಯನಲ್ಲೇ ಅಲ್ಲ, ಎಲ್ಲಾ ಜೀವಜಂತುಗಳಲ್ಲಿಯೂ ಹರಿಯ ಸೇವೆ ಯಾರೇ ಆಗಲಿ ಮಾಡಿದರೆ, ಮತ್ತು ಆತನಿಗೆ ಹೆಸರು ಬೇಕಾಗದೆ, ಕೀರ್ತಿ ಬೇಕಾಗದೆ, ಸತ್ತ ಬಳಿಕ ಸ್ವರ್ಗಕ್ಕೆ ಹೋಗಬೇಕು ಎಂಬ ಇಚ್ಛೆ ಇಲ್ಲದೆ ಇದ್ದರೆ, ಯಾರಿಗೆ ಸೇವೆ ಮಾಡುತ್ತಿದ್ದಾನೊ ಅವರಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಇದ್ದರೆ ಮತ್ತು ಇವೇ ಮೊದಲಾದ ರೀತಿಯಾಗಿ ಸೇವೆ ಮಾಡಿದರೆ, ಆತ ಯಥಾರ್ಥ ನಿಷ್ಕಾಮ ಕರ್ಮವನ್ನು, ಅನಾಸಕ್ತ ಕರ್ಮವನ್ನು ಮಾಡಿದಂತೆ ಆಗುತ್ತದೆ. ಕರ್ಮಯೋಗ ಅನ್ನುವುದು ಇದೇ. ಈ ಕರ್ಮಯೋಗ ಭಗವಂತನನ್ನು ಪಡೆಯುವುದಕ್ಕೆ ಒಂದು ಮಾರ್ಗ. ಆದರೆ ಬಹಳ ಕಠಿನವಾದದ್ದು.

❁ ಸಂಸಾರಾಸಕ್ತಿಯನ್ನು ನಿರ್ಮೂಲ ಮಾಡುವುದಕ್ಕೆ ಸಾಧನೆ ಭಜನೆಯನ್ನು ಮಾಡುವುದು. ಭಗವಂತನ ಚಿಂತನೆ ಹೆಚ್ಚುಹೆಚ್ಚಿದಂತೆಲ್ಲ ಸಂಸಾರದ ಸಾಮಾನ್ಯ ವಸ್ತುಗಳ ಭೋಗಾಸಕ್ತಿ ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಆತನ ಪಾದಪದ್ಮಗಳ ಕಡೆ ಭಕ್ತಿ ಎಷ್ಟು ಪ್ರಮಾಣದಲ್ಲಿ ಬೆಳೆಯುವುದೋ ಅಷ್ಟೇ ಪ್ರಮಾಣದಲ್ಲಿ ವಿಷಯಾಸಕ್ತಿ ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಅಷ್ಟೇ ಪ್ರಮಾಣದಲ್ಲಿ ದೇಹ ಸುಖದ ಕಡೆ ಹಾತೊರೆಯುವುದು ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಪರಸ್ತ್ರೀ ತಾಯಿಯೇ ಎಂಬ ಬೋಧೆಯಾಗುತ್ತದೆ. ಸ್ವಪತ್ನಿ ಅಧ್ಯಾತ್ಮಜೀವನದ ಸಹಾಯಕಿ ಎಂಬ ಬೋಧೆಯಾಗುತ್ತದೆ. ಪಶುಪ್ರವೃತ್ತಿ ಹೊರಟುಹೋಗುತ್ತದೆ. ದೇವಭಾವ ಬಂದುಬಿಡುತ್ತದೆ. ಸಂಸಾರಾಸಕ್ತಿ ಒಮ್ಮೆಗೆಯೆ ಬಿಟ್ಟು ತೊಲಗಿ ಹೋಗುತ್ತದೆ. ಆಗ ನೀನು ಸಂಸಾರದಲ್ಲಿ ಇದ್ದರೂ ಜೀವನ್ಮುಕ್ತನಾಗಿ ಓಡಾಡಿಕೊಂಡು ಇರುತ್ತೀಯೆ.

❁ ಸಂಸಾರಿಗಳು ಕೇಳುತ್ತಾರೆ, 'ಕಾಮಕಾಂಚನದ ಆಸಕ್ತಿ ಏಕೆ ಹೋಗುವುದಿಲ್ಲ?' ಆತನ ಸಾಕ್ಷಾತ್ಕಾರ ದೊರೆತರೆ ಅದು ಹೋಗುತ್ತದೆ. ಒಮ್ಮೆ ಏನಾದರೂ ಬ್ರಹ್ಮಾನಂದ ದೊರೆತುದೇ ಆದರೆ ಇಂದ್ರಿಯ ಸುಖಗಳನ್ನು ಭೋಗಿಸಲಿಕ್ಕೇ ಆಗಲಿ ಅಥವಾ ಹೆಸರು ಕೀರ್ತಿ ಐಶ್ವರ್ಯಗಳನ್ನು ಪಡೆಯುವುದಕ್ಕೇ ಆಗಲಿ ಮನಸ್ಸು ಓಡಿಹೋಗದು. ದೀಪದ ಚಿಟ್ಟೆ ಒಮ್ಮೆ ಬೆಳಕನ್ನು ಕಂಡಿತು ಅಂದರೆ ಅದು ಎಂದಿಗೂ ಕತ್ತಲೆ ಕಡೆ ಹಾರಿಹೋಗುವುದಿಲ್ಲ. ಸಂಸಾರವನ್ನು ಒಮ್ಮೆಗೆಯೆ ತ್ಯಾಗಮಾಡಿಬಿಡುವುದರ ಆವಶ್ಯಕತೆಯೇನಿದೆ? ಆಸಕ್ತಿ ಹೋಯಿತು ಅಂದರೆ ಮುಗಿಯಿತು. ಆದರೆ ಸಾಧನೆ ಆವಶ್ಯಕ; ಇಂದ್ರಿಯಗಳೊಡನೆ ಯುದ್ಧ ಮಾಡಲೇಬೇಕು.

❁ ಕೋಟೆಯೊಳಗಿನಿಂದ ಯುದ್ಧ ಮಾಡುವುದರಲ್ಲಿ ಹೆಚ್ಚು ಅನುಕೂಲ; ಕೋಟೆ ಬಹಳವಾಗಿ ಸಹಾಯ ನೀಡುತ್ತದೆ. ಸಂಸಾರ ಭೋಗಾಲಯ; ಒಂದೊಂದನ್ನಾಗಿ ಅನುಭೋಗಿಸಿ ಅವನ್ನು ಒಡನೆಯೇ ತ್ಯಜಿಸಿಬಿಡಬೇಕು.

**ಶ್ರೀರಾಮಕೃಷ್ಣ ವಚನವೇದದಿಂದ**